# A

SL. No. : ZZ

ಒಟ್ಟು ಪ್ರಶ್ನೆಗಳ ಸಂಖ್ಯೆ : 46 ]

Total No. of Questions : 46 ]

**ಸಂಕೇತ ಸಂಖ್ಯೆ : 62-K**

**CCE RF**
**CCE RR**
**REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 04. 04. 2019 ] [ Date : 04. 04. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 46 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

## ವಿಭಾಗ – 'ಎ'

### (ಗದ್ಯ, ಪದ್ಯ, ಪೂರಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 10 × 1 = 10

1. ಭಾರತದಲ್ಲಿ ಅಲೆಮಾರಿಗಳು ರಾತ್ರಿವೇಳೆಯಲ್ಲಿ ತಂಗಲು ಇರುವ ಸ್ಥಳಗಳಾವುವು ?
2. ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗ್ಗೆ ಗೊರೂರರಲ್ಲಿ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡರು ?
3. ಕೊಡಗಿನ ಗೌರಮ್ಮನವರ ವಿವಾಹವು ಯಾರೊಡನೆ ಆಯಿತು ?
4. ಆರ್. ಕಲ್ಯಾಣಮ್ಮ ಯಾರು ?
5. ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು ?
6. ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಯಾವುವು ?
7. ಸಿ.ಪಿ.ಕೆ.ಯವರು ಗ್ರಂಥಗಳನ್ನು ಯಾವುದರ ಪಳೆಯುಳಿಕೆ ಎಂದಿದ್ದಾರೆ ?
8. ಬಸವಣ್ಣನವರ ಸ್ವರ್ಗದ ಕಲ್ಪನೆ ಎಲ್ಲರೂ ಮೆಚ್ಚುವಂತಹುದು ಏಕೆ ?
9. ಸೋಮನಾಥನು ಹೇಳಿರುವಂತೆ ಬೇರೆಯವರು ಸಾಲಕ್ಕೆ ಯಾವಾಗ ಹೊಣೆಯಾಗಬಹುದು ?
10. ಧರ್ಮಪದನು ಯಾವ ದೇವಾಲಯದ ಕಲಶವನ್ನು ಜೋಡಿಸಿದನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10 × 2 = 20

11. ಮಿನಿ ಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?
12. ಗೌರಮ್ಮನವರು ಗಾಂಧೀಜಿಯವರು ತಮ್ಮ ಮನೆಗೆ ಬರುವಂತೆ ಹೇಗೆ ಮಾಡಿದರು ?
13. ಜಿನೋವಾದ ಪ್ರವಾಸಿ ಪಿತ್ರೋ ಅಬ್ಬಕ್ಕನನ್ನು ಕುರಿತು ಏನೆಂದು ಬರೆದಿದ್ದಾನೆ ?
14. ಬೀಚಿಯವರು ಕನ್ನಡದ ದೀಕ್ಷೆಯನ್ನು ಸ್ವೀಕರಿಸಿದ ಶುಭ ಮುಹೂರ್ತ ಯಾವುದು ?
15. ಬೀಚಿಯವರು ಟ್ರೇನಿನಲ್ಲಿ ಪುಸ್ತಕವನ್ನು ಬಚ್ಚಿಟ್ಟುಕೊಂಡು ಓದಲಾರಂಭಿಸಿದ್ದೇಕೆ ?
16. ಮನುಷ್ಯರ ನಡುವಿನ ವೈಮನಸ್ಸನ್ನು ತೊಡೆದು ಹಾಕುವ ಸತೀಶ್ ಕುಲಕರ್ಣಿಯವರ ಕನಸು ಮೆಚ್ಚುವಂತಹುದು ಹೇಗೆ ?
17. ಕ್ರಾಂತಿಕಾರಿಗಳು ಕನಸಿನ ಹಾಡನ್ನು ಹೇಗೆ ಕಟ್ಟಿದ್ದಾರೆ ಎಂದು ಕವಿತೆಯು ತಿಳಿಸುತ್ತದೆ ?
18. ಡಾಂಭಿಕನ ಭಕ್ತಿ ನೋಡಿ ಬದಿಯಲ್ಲಿದ್ದವರಿಗೆ ಆಶ್ಚರ್ಯವಾಗಲು ಕಾರಣವೇನು ?
19. ಪುರಂದರದಾಸರು ಡಾಂಭಿಕನ ಭಕ್ತಿಯನ್ನು ನಾಟಕಸ್ತ್ರೀಗೆ ಹೇಗೆ ಹೋಲಿಸಿದ್ದಾರೆ ?
20. ಈರಪ್ಪ ಎಂ. ಕಂಬಳಿಯವರು ಊರು ದಾಟುವವರೆಗೂ ತಲೆ ಕೆಳಗೆ ಹಾಕಿ ಕುಳಿತಿದ್ದೇಕೆ ?

**ಈ ಕೆಳಗಿನ ಹೇಳಿಕೆಗಳ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿರಿ :** 2 × 3 = 6

21. "ತಾಯಿ ಎಂದು ಕರೆದ ಕನ್ನಡದ ಕಂದ ಯಾರು ?"

22. "ಭೂಮಿತಾಯ ಕುಡಿಗಳೆಂದು ಪಣವ ತೊಡಿರಿ ಇಂದೆ".

23. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಕಣ್‌ದಿಟ್ಟಿ ..........................................................

..........................................................................

........................................................ ನಿಲ್ಲುವೆನು.

***ಅಥವಾ***

ನುಚ್ಚು ನೂರಾಗಿಸುವುದೀ ..........................................

..........................................................................

........................................................ ಬಹಲಯಕೆ!

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

24. ಎಸ್.ಆರ್. ರೋಹಿಡೇಕರ್

25. ಬಸವಣ್ಣ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

26. ಗೋವಿಂದ ಭಟ್ಟರ ಗುಣಸ್ವಭಾವಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

***ಅಥವಾ***

ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ವಿವರಿಸಿರಿ.

27. ಮಳೆದೇವರಲ್ಲಿ ರೈತನ ಪ್ರಾರ್ಥನೆಯೇನು ಎಂದು ವಿವರಿಸಿರಿ.

***ಅಥವಾ***

'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $12 \times 1 = 12$

28. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ದೀರ್ಘಸ್ವರಗಳ ಸಂಖ್ಯೆ

    (ಎ) ಆರು (ಬಿ) ಏಳು

    (ಸಿ) ಹದಿಮೂರು (ಡಿ) ಐದು

29. ಕೆಳಗಿನ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರ ಪದವಿದು

    (ಎ) ಅಂತಃಪುರ (ಬಿ) ಕುಂಕುಮ

    (ಸಿ) ಪುಸ್ತಕ (ಡಿ) ಕುಚ್ಚಲು

30. 'ಬರೆಯುತೇವ' ಪದದ ಗ್ರಾಂಥಿಕ ರೂಪವಿದು

    (ಎ) ಬರೇತೇನೆ (ಬಿ) ಬರೀತಾನೆ

    (ಸಿ) ಬರೆವೆವು (ಡಿ) ಬರೆಯುತ್ತೇವೆ

31. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಾಗಿರುವ ಪದವಿದು

    (ಎ) ನಾನು (ಬಿ) ತಾನು

    (ಸಿ) ನೀನು (ಡಿ) ಅವನು

32. 'ಹಿಮಾಲಯ' ಪದವು ಇಂತಹ ನಾಮಪದಕ್ಕೆ ಉದಾಹರಣೆಯಾಗಿದೆ

    (ಎ) ಅಂಕಿತನಾಮ (ಬಿ) ರೂಢನಾಮ

    (ಸಿ) ಅನ್ವರ್ಥನಾಮ (ಡಿ) ಸರ್ವನಾಮ

33. ತೃತೀಯಾ ವಿಭಕ್ತಿ ಪ್ರತ್ಯಯ

    (ಎ) ಅ (ಬಿ) ಅಲ್ಲಿ

    (ಸಿ) ಇಂದ (ಡಿ) ದೆಸೆಯಿಂದ

34. ‘ಕುಡಿಗಳೆಂದು’ ಪದವನ್ನು ಬಿಡಿಸಿದಾಗ ಆಗುವ ರೂಪ

(ಎ) ಕುಡಿಗಳು + ಹಿಂದು (ಬಿ) ಕುಡಿಗಳು + ಎಂದು

(ಸಿ) ಕುಡಿಗಳು + ಇಂದು (ಡಿ) ಕುಡಿಗಳು + ಮುಂದು

35. “ಗೌರಿಯ ಮುಖ ಕಮಲದಂತೆ ಅರಳಿತು.” ಈ ವಾಕ್ಯದಲ್ಲಿರುವ ಉಪಮೇಯ

(ಎ) ಅಂತೆ (ಬಿ) ಅರಳಿತು

(ಸಿ) ಕಮಲ (ಡಿ) ಗೌರಿಯ ಮುಖ

36. ನಿನ್ನದು ಯಾವ ಊರು ? ನಿನ್ನ ಹೆಸರೇನು ? ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ

(ಎ) ಪ್ರಶ್ನಾರ್ಥಕ ಚಿಹ್ನೆ (ಬಿ) ವಿವರಣಾತ್ಮಕ ಚಿಹ್ನೆ

(ಸಿ) ಅರ್ಧವಿರಾಮ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ

37. ‘ಸಾಬೂನು’ ಪದವು ಈ ಭಾಷೆಯಿಂದ ಬಂದ ಶಬ್ದವಾಗಿದೆ

(ಎ) ಇಂಗ್ಲಿಷ್ (ಬಿ) ಪೋರ್ಚುಗೀಸ್

(ಸಿ) ಹಿಂದೂಸ್ಥಾನಿ (ಡಿ) ಸಂಸ್ಕೃತ

38. ಕೆಳಗಿನ ಪದಗಳಲ್ಲಿ ದ್ವಿರುಕ್ತಿ ಪದವಿದು

(ಎ) ಪಟಪಟ (ಬಿ) ಧಗಧಗ

(ಸಿ) ನಡೆನಡೆ (ಡಿ) ರೀತಿನೀತಿ

39. ‘ಪರಿಚಿತ’ ಪದದ ವಿರುದ್ಧಾರ್ಥಕ ರೂಪವಿದು

(ಎ) ಸುಪರಿಚಿತ (ಬಿ) ವಿಪರಿಚಿತ

(ಸಿ) ಕುಪರಿಚಿತ (ಡಿ) ಅಪರಿಚಿತ

## ವಿಭಾಗ – 'ಸಿ'
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಭಗೂರು ಎಂಬ ಚಿಕ್ಕ ಹಳ್ಳಿಯಲ್ಲಿದ್ದ ದಾಮೋದರ ಪಂತ್ ಸಾವರ್ಕರ್ ಮತ್ತು ರಾಧಾಬಾಯಿ ಎನ್ನುವ ದಂಪತಿಗಳ ಮಕ್ಕಳು ಗಣೇಶ ಮತ್ತು ವಿನಾಯಕ. ಭಾರತವು ಆಗ ಬ್ರಿಟಿಷರ ಆಳ್ವಿಕೆಯಲ್ಲಿತ್ತು. 1897 ನೇ ಇಸ್ವಿಯಲ್ಲಿ ಭಾರತದಾದ್ಯಂತ ವಿಕ್ಟೋರಿಯಾ ಮಹಾರಾಣಿಯ ಸಿಂಹಾಸನಾರೋಹಣದ ವಜ್ರಮಹೋತ್ಸವ ಆಚರಿಸುವಂತೆ ಬ್ರಿಟಿಷ್ ಸರ್ಕಾರದ ಆಜ್ಞೆಯಾಗಿತ್ತು. ಅದೇ ಸಮಯಕ್ಕೆ ಮಹಾರಾಷ್ಟ್ರದಲ್ಲೆಲ್ಲಾ ಪ್ಲೇಗಿನ ಪಿಡುಗು ಬೇರೆ! ಜನರು ನೊಣಗಳಂತೆ ಪಟಪಟನೇ ಸಾಯುತ್ತಿದ್ದರು. ಎತ್ತ ನೋಡಿದರತ್ತ ಪ್ಲೇಗಿನ ಹಾವಳಿ. ಇಂಥ ಸಂದರ್ಭದಲ್ಲಿ ಆಳರಸಿಯ ಸಿಂಹಾಸನಾರೋಹಣದ ಉತ್ಸವ ಆಚರಿಸುವುದು ದೇಶಪ್ರೇಮಿ ತರುಣರಿಗೆ ಒಪ್ಪಿಗೆಯಾಗಲಿಲ್ಲ. ಚಾಪೇಕರ್ ಸಹೋದರರು ಎಂಬ ದೇಶಭಕ್ತರು ಈ ಉತ್ಸವದ ಆಚರಣೆ ವಿರೋಧಿಸಿ ಇಬ್ಬರು ಆಂಗ್ಲ ಅಧಿಕಾರಿಗಳನ್ನು ಗುಂಡಿಟ್ಟು ಕೊಂದರು. ಚಾಪೇಕರ್ ಸಹೋದರರನ್ನು ಬಂಧಿಸಿ ಆಂಗ್ಲರು ಅವರನ್ನು ಗಲ್ಲಿಗೇರಿಸಿದರು. ಚಾಪೇಕರ್ ಸಹೋದರರ ಈ ಸಾಹಸ ಬಲಿದಾನ ಸಾವರ್ಕರ್ ಸಹೋದರರ ಮೇಲೆ ಅಚ್ಚಳಿಯದ ಪ್ರಭಾವ ಮೂಡಿಸಿತು. ಬಾಲಕ ವಿನಾಯಕನಂತೂ ಚಾಪೇಕರ್ ಸಹೋದರರ ಸಾಹಸ ಮತ್ತು ಬಲಿದಾನವನ್ನು ಕುರಿತು ವೀರ ಕವನವನ್ನು ಬರೆದನು.

*ಪ್ರಶ್ನೆಗಳು :*

40. 1897 ರಲ್ಲಿ ಬ್ರಿಟಿಷ್ ಸರ್ಕಾರ ಹೊರಡಿಸಿದ ಆಜ್ಞೆ ಏನಾಗಿತ್ತು ?
41. ಚಾಪೇಕರ್ ಸಹೋದರರು ಉತ್ಸವ ಆಚರಿಸುವುದನ್ನು ವಿರೋಧಿಸಲು ಕಾರಣವೇನು ?
42. ಆಂಗ್ಲರು ಚಾಪೇಕರ್ ಸಹೋದರರನ್ನು ಬಂಧಿಸಿ ಗಲ್ಲಿಗೇರಿಸಲು ಕಾರಣವೇನು ?
43. ಚಾಪೇಕರ್ ಸಹೋದರರ ಬಲಿದಾನ ವಿನಾಯಕನ ಮೇಲೆ ಯಾವ ಪ್ರಭಾವವನ್ನು ಮೂಡಿಸಿತು ?

44. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

* ಮನಸ್ಸಿದ್ದರೆ ಮಾರ್ಗ
* ಕೈ ಕೆಸರಾದರೆ ಬಾಯಿ ಮೊಸರು
* ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ

45. ನಿಮ್ಮನ್ನು ಬೆಂಗಳೂರಿನ ಬಸವನಗುಡಿಯ ಮಾದರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ 'ಸತ್ಯಾರ್ಥ' ಎಂದು ಭಾವಿಸಿಕೊಂಡು, ನಿಮ್ಮ ಮನೆಯಲ್ಲಿ ಸಮಾರಂಭವಿರುವ ಕಾರಣ ಶಾಲೆಗೆ ಎರಡು ದಿನ ಬರಲು ಸಾಧ್ಯವಿಲ್ಲವೆಂದು ತಿಳಿಸಿ ನಿಮ್ಮ ತರಗತಿ ಶಿಕ್ಷಕರಿಗೆ ರಜಾ ಅರ್ಜಿಯೊಂದನ್ನು ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಚಿತ್ರದುರ್ಗದ ಕಸ್ತೂರಿಬಾಯಿ ವಸತಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ 'ಕಾತ್ಯಾಯಿನಿ' ಎಂದು ಭಾವಿಸಿಕೊಂಡು, ಬೆಂಗಳೂರಿನಲ್ಲಿರುವ ನಿಮ್ಮ ತಂದೆಯವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಪತ್ರವೊಂದನ್ನು ಬರೆಯಿರಿ.

46. **ಈ ಕೆಳಗಿನ ಯಾವುದಾದರೂ *ಒಂದು* ವಿಷಯದ ಬಗ್ಗೆ ಹತ್ತು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :** $1 \times 4 = 4$

- ಶಾಲೆಗಳಲ್ಲಿ ಗ್ರಂಥಾಲಯಗಳ ಉಪಯುಕ್ತತೆ
- ಅರಣ್ಯ ನಾಶದಿಂದಾಗುವ ದುಷ್ಪರಿಣಾಮಗಳು
- ಶಿಕ್ಷಕರ ದಿನಾಚರಣೆಯ ಪ್ರಾಮುಖ್ಯತೆ